

ಬಂದವರೆ, ಮೇಜನ್ನು ಪ್ರೀತಿಯಿಂದ ಸವರಿದರು. 'ನೋಡಿ, ಇದು ಇದರ ಜೊತೆ ಇರುವ ಎರಡು ಕುರ್ಚಿಗಳು, ಟೆಂಪೋ ತಂದಿದ್ದೇನೆ' ಎಂದವರು, ಹಿಂದಿರುಗಿ ನೋಡದೆ ಹೊರಟುಬಿಟ್ಟರು. ತಕ್ಷಣ ಆ ವ್ಯವಸ್ಥಾಪಕ ಒಬ್ಬ ಹುಡುಗನನ್ನು ಕರೆದು,

'ಏಯ್ ಆ ಮೂಲೆಯಲ್ಲಿದ್ಯಲ್ಲ ಆ ತೇಗದ ದುಂಡಗಿನ ಮೇಜು, ಎರಡು ಕುರ್ಚಿ ಆ ಟೆಂಪೋದಲ್ಲಂತೆ ಹಾಕಿ'

'ಎಲ್ಲಿಗೆ ...?'

'ಅಯ್ಯೋ ಈ ಹೋಟೆಲು ಮಾರಿದ್ರಲ್ಲಾ ಆ ಯಜಮಾನರ ಮನೆಗಂತೆ. ಆ ಮನುಷ್ಯಾನೂ ಓಲ್ಡ್ ಮಾಡೆಲ್ಲು. ಈ ಮೇಜು ಅವನಿಗೆ ಸರಿಯಾಗಿ ಸೂಟ್ ಆಗುತ್ತೆ. ಹಹ... ಹಹ...ಆಹಾ...'

ಅವನ್ಯಾರೋ ನಗುತ್ತಲೇ ಇದ್ದ. ಮೇಜಿಗೂ ನಗಬೇಕೆನಿಸಿತು. ಹುಚ್ಚೆದ್ದು ಕುಣಿಯಬೇಕೆನಿಸಿತು. ತನ್ನ ಯಜಮಾನರ ಮನೆಯ ಮೂಲೆಯಾದರೂ ಸರಿ. ಅದು ಸ್ವರ್ಗಕ್ಕಿಂತ ಹೆಚ್ಚು ಕಣ್ರೋ ಸದ್ಯ, ನಿಮ್ಮಂಥ ಸಿಂಗಳೀಕರನ್ನು ಇನ್ನೂ ಮುಂದೆ ನೋಡುವುದು ತಪ್ಪಿತಲ್ಲ.'

ಪಾಪಿ ಅವನು ಎಳೆಯುವ ಒರಟುತನಕ್ಕೆ ಅದರ ಕಾಲಿಗೆ ಸ್ವಲ್ಪ ಗಾಯವಾಯಿತು.

'ನಿಧಾನಾನೋ ಮೊದಲೇ ಲಟ್ಟಾಸು. ಅವರ ಮನೆಗೆ ಹೋಗುವವರೆಗಾದರೂ ಸರಿ ಇರಲಿ' ಹೊಸ ಯಜಮಾನ ಈ ಮಾತಿಗೆ ಮೀಸೆಯಂಚಿನಲ್ಲಿ ನಗುತ್ತಿದ್ದ. ಮೇಜು ನೋಡುತ್ತಿತ್ತು ಅವನು ಕುಡಿಯುತ್ತಿದ್ದ ಕಾಫಿ ಲೋಟದ ಹಿಂಭಾಗ 'ಉಪಾಹಾರ ದರ್ಶಿನಿಯಿಂದ ಕದ್ದದ್ದು' ಅಂತಾ ಕೆಂಪು ಪೈಂಟಿನಲ್ಲಿ ಬರೆದಿತ್ತು. '

'ಥೂ ನಿಮ್ಮ, ಕದ್ದಿರೋದು ಅಲ್ಲದೆ ನಗ್ತಾನೆ, ನಗ್ರೋ... ನೀವೇನೂ ಗಂಧರ್ವರಲ್ಲ. ನಾಳೆ ನಿಮ್ಮ ಗತಿಯೂ ನನ್ನ ಹಾಗೆ. ನನಗೆ ಪ್ರೀತಿಸುವವರಾದರೂ ಇದ್ದಾರೆ, ನನ್ನ ಕೊನೆಯಗಾಲದಲ್ಲಿ ನಮ್ಮ ಯಜಮಾನರ ಮನೆಯ ಆಶ್ರಯ ಸಿಕ್ಕಿದೆ. ನಿಮಗೆ ಯಾರೂ ಇರುವುದಿಲ್ಲ. ನಾನು ಕಾಫಿ ಕುಡಿದಷ್ಟೂ ನೀವು ನೀರು ಕುಡಿದಿಲ್ಲ' ಎಂದು ಮೇಜಿಗೆ ಕೂಗಿ ಹೇಳಬೇಕೆನಿಸಿತು.

ಕಥೆಗಾರ್ತಿಯನ್ನು ಯಾರೋ ಅಲುಗಾಡಿಸಿದಂತೆ ಆಯಿತು. ಅವಳು ಎದ್ದು ನಿಂತಳು. ಆ ಮೇಜು ಟೆಂಪೋ ಏರಿ ಕುಳಿತಿತ್ತು. 'ನಾನು ಹೇಳಿದ ಕಥೆಗಳನ್ನು ಬರೀತೀರಲ್ವಾ?' ಮೇಜು ಅಲ್ಲಿಂದಲೇ ಕೂಗಿ ಹೇಳಿತು. ಅಬ್ಬಾ ಎಂತಹ ಅನುಭವ ಒಂದು ಕಥೆಯ ಬಗ್ಗೆ ಚಿಂತಿಸಲು ಬಂದರೆ ಸಾಲುಸಾಲು ಕಥೆಗಳನ್ನು ಮೇಜು ಬಿತ್ತರಿಸಿದೆ. ಒಂದು ಕುಟುಂಬದಲ್ಲಿ ತಾಯಿಯ ಪಾತ್ರದಂತೆ ಅದರ ಅನುಭವದ ಕಥಾನಕಗಳು. ಓದಿದಾಗ ಕಥೆಗಳು ಬೆಂಬಿಡದೆ ಕಾಡಬೇಕು, ಪಾತ್ರದೊಳಗೆ ತಾವೇ ಇರುವಂತೆ ಭಾಸವಾಗಬೇಕು, ಕುಳಿತಲ್ಲಿ, ನಿಂತಲ್ಲಿ ಅದೇ ಧ್ಯಾನ ಮಾಡಬೇಕು. ಇದೇನು ಕಥೆಗಾರ ನನ್ನ ಕಥೆಯನ್ನೇ ಬರೆದಿರುವನಲ್ಲಾ ಎಂದು ಚಿಂತೆಗೀಡಾಗಬೇಕು. ಅದೇ ಕಥೆಗಾರನ ಸಾರ್ಥಕತೆ. ಕಥೆಗಾರ್ತಿ ತನ್ನ ಸ್ಥಳದಿಂದಲೇ ಆ ಮೇಜಿಗೆ ವಂದನೆ ಸಲ್ಲಿಸಿದಳು.

ಕೆಳಗಿನ ಮಾಯಾಲೋಕಕ್ಕೆ ಹೋಗುವ ಇಚ್ಛೆ ಇರದೆ ಸೀದಾ ಲಿಫ್ಟಿನಿಂದ ಕೆಳಗಿಳಿದಳು. ಆ ಮೇಜಿನ ಡ್ರೈರಿಯಿಂದ ಸಿಕ್ಕ ಸಾಕಷ್ಟು ಸರಕು ನೂರಾರು-ಸಾವಿರಾರು ಕಥೆಗಳಾಗುವಷ್ಟಿದ್ದವು. ಹೊಸ ನೀರು ಹಳೆಯ ನೆನಪು. ●